ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ:–ಸಿ3(7)ಪ್ರಾ.ಶಿ.ವರ್ಗ 01/2016–17 ದಿ: 27–09–2016

**ಜ್ಞಾಪನ**

ವಿಷಯ: 2016–17 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ:

******

## ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಅಂತರ ಘಟಕ – ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 28–09–2016 ಬುಧವಾರ | 751 ರಿಂದ 1000 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 2 | 28–09–2016 ಬುಧವಾರ | 151 ರಿಂದ 300 ರವರೆಗಿನ **ಪ್ರೌಢಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

( ದೈಹಿಕ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರುಗಳ ಕೌನ್ಸಿಲಿಂಗ್ ಸಹಶಿಕ್ಷಕರ ಕೌನ್ಸಿಲಿಂಗ್ ಮುಗಿದ ನಂತರ ಹಮ್ಮಿಕೊಳ್ಳಲಾಗುವುದು)

**ಕೌನ್ಸಿಲಿಂಗ್ ನಡೆಯುವ ಸ್ಥಳ:**

1. ಬೆಂಗಳೂರು ವಿಭಾಗ – **ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು –02**
2. ಮೈಸೂರು ವಿಭಾಗ – **ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು**
3. ಕಲಬುರಗಿ ವಿಭಾಗ – **ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರ್ಗಿ.**
4. ಬೆಳಗಾವಿ ವಿಭಾಗ – **ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ .**

**ಬೆಳಿಗ್ಗೆ: 09–30 ರಿಂದ ಪ್ರಾರಂಭ.**

**ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

1. ತೀವ್ರತರ ಖಾಯಿಲೆ ಪ್ರಕರಣ – ಅಂಗವಿಕಲ ಪ್ರಕರಣಗಳಲ್ಲಿ– ವೈದ್ಯಕೀಯ ಮಂಡಳಿಯಿಂದ ನೀಡಿರುವ ಪ್ರಮಾಣ ಪತ್ರದೊಂದಿಗೆ ಹಿಂದಿನ ವೈದ್ಯಕೀಯ ತಪಾಸಣೆಯ ಮತ್ತು ಚಿಕಿತ್ಸೆ ದಾಖಲೆಗಳು. ವೈದ್ಯಕೀಯ ಮಂಡಳಿ ಎಂದರೆ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.
2. ಶಿಕ್ಷಕರುಗಳು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣ ಪತ್ರ.
3. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ.
4. ಸಂಬಂಧಪಟ್ಟ ಬಿ.ಇ.ಓ / ಉಪನಿರ್ದೇಶಕರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ಪಡೆದ ಬಗ್ಗೆ ದೃಢೀಕರಣಪತ್ರ.
5. ನೇಮಕಾತಿ ಆದೇಶ ಪತ್ರ ಮತ್ತು ಕಳೆದ ಬಾರಿ ವರ್ಗಾವಣೆ ಪಡೆದಿದ್ದಲ್ಲಿ ವರ್ಗಾವಣಾ ಆದೇಶದ ಪ್ರತಿ.
6. ಇತ್ತೀಚಿನ ಹೆಚ್.ಆರ್. ಎಂ.ಎಸ್ ವೇತನ ಪತ್ರ.
7. ಅಂಗವಿಕಲರಾಗಿದ್ದಲ್ಲಿ, ಮೂಲ ಅಂಗವಿಕಲ ಪ್ರಮಾಣ ಪತ್ರ ಮತ್ತು ಅಂಗವಿಕಲ ಭತ್ಯೆ ಪಡೆಯುತ್ತಿರುವ ಬಗ್ಗೆ ದೃಢೀಕರಣಪತ್ರ.
8. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
9. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ
10. **ವಿಧವಾ ಪ್ರಕರಣ ––––** ಪತಿಯ ಮರಣ ಪ್ರಮಾಣ ಪತ್ರ.
11. ಪತಿ–ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್)
12. ಕೆ.ಎ.ಟಿ ಯಿಂದ ಮಧ್ಯಂತರ ಆದೇಶವನ್ನು ಪಡೆದಿರುವ ಎಸ್.ಎಸ್.ಎ ಸಹಶಿಕ್ಷಕರು/ಎಸ್.ಎಸ್.ಎ–ಟಿ.ಜಿ.ಟಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಾಗ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುವುದು.

ಸಹಿ/–

(ಕೆ. ಆನಂದ )

**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**

ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,